ಓ.ಎಸ್. ನಂಃ152/2018

ಪಿ.ಡಬ್ಲ್ಯೂ -01

ದಿನಾಂಕ.27.07.2021 ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ ವಾದಿಪರ ಶ್ರೀ ಜಿ.ಕೆ.ಆರ್.ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದ, ವಿಚಾರಗಳನ್ನು ಸತ್ಯಾಪನೆಯ ರೂಪದಲ್ಲಿ ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ ಹಾಗೂ ಅದರಲ್ಲಿ ಸಹಿ ನನ್ನದಾಗಿರುತ್ತದೆ.

ದಿನಾಂಕ.28.04.1989 ರ ಕ್ರಯ ಪತ್ರದ ಮೂಲ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.-1 ಎಂದು, 2000-01 ಕಂದಾಯ ಪಾವತಿ ಬಗ್ಗೆ ಅಸೆಸ್ಮೆಂಟ್ ಲಿಸ್ಟ್ ನ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.-2 ಎಂದು, 2005-06 ಮತ್ತು 2011-12 ರ ನಮೂನೆ-3 ರ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ.-3 ಮತ್ತು 4 ಎಂದು, ದಿನಾಂಕ.19.05.2017 ರಂದು ಪ್ರತಿವಾದಿಗಳಿಗೆ ನೀಡಲಾದ ಕಾನೂನು ತಿಳುವಳಿಕೆ ಪತ್ರದ ಕಚೇರಿ ಪತ್ರಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.-5 ಎಂದು, ಸದರಿ ಕಾನೂನು ತಿಳುವಳಿಕೆ ಪತ್ರ 3 ರಿಂದ 5 ಮತ್ತು 7 ನೇ ಪ್ರತಿವಾದಿಗಳಿಗೆ ಜಾರಿಯಾದ ಬಗ್ಗೆ ಸ್ವೀಕೃತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ.-5( ಎ ರಿಂದ ಡಿ) ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಆಲಿಸಿ ಅನುಮತಿಸಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

ಅಪರ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಚಳ್ಳಕೆರೆ.